ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/04/ಇಸಿಎಸ್(1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-1
ದಿನಾಂಕ:28.07.2025

## ಜ್ಞಾಪನ

ವಿಷಯ: ಜುಲೈ2025ರ ಡಿಪ್ಲೊಮಾ Makeup ಪರೀಕ್ಷೆಯ (SEE) ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ಬೆಂಗಳೂರು ನೋಡಲ್ ಮೌಲ್ಯಮಾಪನ ಕೇಂದ್ರದಲ್ಲಿ ಜರುಗಿಸುವ ಬಗ್ಗೆ.

ಉಲ್ಲೇಖ:
1) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ:01.07.2025
2)ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ:25.07.2025
3) ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ:10.07.2025
4)ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ:25.07.2025
5)ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ/04/ಇಸಿಎಸ್(1)/2025 ದಿ:25.07.2025
6) ಸರ್ಕಾರದ ಆದೇಶ ಸಂಖ್ಯೆ:ಇಡಿ 57 ಟಿಪಿಇ 2010 ದಿ:17.04.2022

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಜ್ಞಾಪನದನ್ವಯ ತಾಂತ್ರಿಕ ಪರೀಕ್ಷಾ ಮಂಡಳಿಯ ಜುಲೈ 2025 ರ ಡಿಪ್ಲೊಮಾ Makeup ಪರೀಕ್ಷೆಯ (SEE) ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯವನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾಂತ್ರಿಕ ಪರೀಕ್ಷಾ ಮಂಡಳಿ/ ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು ನೋಡಲ್ ಮೌಲ್ಯಮಾಪನ ಕೇಂದ್ರದಲ್ಲಿ ನಡೆಸಲು ನೋಡಲ್ ಅಧಿಕಾರಿ/ಶಿಬಿರಾಧಿಕಾರಿ/ ಸಹಾಯಕ ಶಿಬಿರಾಧಿಕಾರಿಗಳನ್ನು ನಿಯೋಜಿಸಿ ಮೌಲ್ಯಮಾಪನ ಕಾರ್ಯವನ್ನು ಯಶಸ್ವಿಯಾಗಿ ನಡೆಸಲು ಸೂಚಿಸಲಾಗಿದೆ.

ಮುಂದುವರೆದು, ಮೌಲ್ಯಮಾಪನ ಕಾರ್ಯವನ್ನು **ದಿನಾಂಕ:31.07.2025 ರಿಂದ 05.08.2025 ರವರೆಗೆ** ಬೆಂಗಳೂರು ಮೌಲ್ಯಮಾಪನ ಕೇಂದ್ರದಲ್ಲಿ ನಡೆಸಲು ಕ್ರಮಕೈಗೊಳ್ಳಲಾಗಿದ್ದು, ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಂದ ನಿಯೋಜಿಸಲ್ಪಟ್ಟ ಉಪನ್ಯಾಸಕರ ಪಟ್ಟಿಯನ್ನು ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿ ಮೌಲ್ಯಮಾಪನ ದಿನಾಂಕವನ್ನು ಮೌಲ್ಯಮಾಪಕರ ಗಮನಕ್ಕೆ ತರಲು ಹಾಗೂ ನಿಗದಿಪಡಿಸಲಾದ ದಿನಾಂಕಗಳಂದು ಮೌಲ್ಯಮಾಪನ ಕಾರ್ಯಕ್ಕೆ ತಪ್ಪದೇ ಹಾಜರಾಗಲು ಸೂಚಿಸಿ ಕಡ್ಡಾಯವಾಗಿ ಕಾರ್ಯ ನಿಯುಕ್ತಿಗೊಳಿಸಲು ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

**ಮೌಲ್ಯಮಾಪನ ಕೇಂದ್ರದ ವಿವರ/ವಿಳಾಸವನ್ನು ಈ ಕೆಳಗೆ ನೀಡಲಾಗಿದೆ.**

| ಮೌಲ್ಯಮಾಪನ ಕೇಂದ್ರ | ವಿಷಯ/ಬೋರ್ಡ್ | ಪ್ರಾರಂಭ ದಿನಾಂಕ | ಮುಕ್ತಾಯ ದಿನಾಂಕ |
|---|---|---|---|
| ಎಸ್.ಜೆ.(ಸರ್ಕಾರಿ) ಪಾಲಿಟೆಕ್ನಿಕ್, ಬೆಂಗಳೂರು ಕ್ಯಾಂಪಸ್ | | | |
| i)ಎಸ್.ಜೆ.ಪಿ. ವಿಶ್ವೇಶ್ವರಯ್ಯ ಬ್ಲಾಕ್ | 20PM01T (ಎಲ್ಲಾ ಬೋರ್ಡ್‌ಗಳು) | 31.07.2025 | 05.08.2025 |
| ii)ಸ॥ ಮಹಿಳಾ ಪಾ॥ ಸಿಪಿ ಬ್ಲಾಕ್ | SCIENCE | 31.07.2025 | 05.08.2025 |
| iii)ಎಸ್.ಜೆ.ಪಿ. ವಿಶ್ವೇಶ್ವರಯ್ಯ ಬ್ಲಾಕ್ | CE, CD, EN (ಸಿವಿಲ್ ಬೋರ್ಡ್) | 31.07.2025 | 05.08.2025 |
| | ME, MY, HP, WS (ಮೆಕ್ಯಾನಿಕಲ್ ಬೋರ್ಡ್) | 31.07.2025 | 05.08.2025 |
| | AT, AR, ID, MC, MI, MN, MT, PT, TD, ADFT, AN, CH, CR, LT, IT, PO, TX, EI, CN, IC, SR ಇತರೆ ವಿಷಯಗಳು (ಆಟೋ ಬೋರ್ಡ್) | 31.07.2025 | 05.08.2025 |
| iv)ಎಸ್.ಜೆ.ಪಿ. ಎಲೆಕ್ಟ್ರಿಕಲ್ ಬ್ಲಾಕ್ | E&EE | 31.07.2025 | 05.08.2025 |
| v)ಸ॥ ಮಹಿಳಾ ಪಾ॥ ಮೈನ್ ಬ್ಲಾಕ್ | E&C | 31.07.2025 | 05.08.2025 |
| vi)ಸ॥ಮುದ್ರಣ & ತಂ.ಸಂಸ್ಥೆ ಕಟ್ಟಡ | CS, IS | 31.07.2025 | 05.08.2025 |
| vii)ಜಿ.ಆರ್. ಐ.ಸಿ.ಪಿ. ಮೊದಲನೇ ಮಹಡಿ | CP, LI, KANNADA | 31.07.2025 | 05.08.2025 |
| viii) ಜಿ.ಆರ್.ಐ.ಸಿ.ಪಿ. ಎರಡನೇ ಮಹಡಿ | ENGLISH | 31.07.2025 | 05.08.2025 |

ಜುಲೈ 2025 ರ ಡಿಪ್ಲೊಮಾ Makeup ಪರೀಕ್ಷೆಗೆ (SEE) ಸಂಬಂಧಿಸಿದಂತೆ ಉಲ್ಲೇಖ (2) ರ ಜ್ಞಾಪನದಲ್ಲಿ ವಿವಿಧ ವಿಷಯ ಸಮಿತಿಗಳ ಮೇಲ್ವಿಚಾರಕರುಗಳನ್ನು ನೇಮಿಸಲಾಗಿದೆ. ಸದರಿ ಅಧಿಕಾರಿಗಳು ತಮಗೆ ನೀಡಲಾದ ಕಾರ್ಯವನ್ನು ಉಲ್ಲೇಖ (3)ರ ಜ್ಞಾಪನದನ್ವಯ ಸಮರ್ಪಕವಾಗಿ ನಿರ್ವಹಿಸಬೇಕೆಂದು ಆದೇಶಿಸಲಾಗಿದೆ. ಪ್ರತಿಯೊಬ್ಬ ಮೌಲ್ಯಮಾಪಕರು ಪ್ರತಿ ದಿನಕ್ಕೆ 25 ಥಿಯರಿ ಉತ್ತರ ಪತ್ರಿಕೆ/30 ಡ್ರಾಯಿಂಗ್ ಉತ್ತರಪತ್ರಿಕೆಗಳನ್ನು ಉಲ್ಲೇಖ (4) ರ ಜ್ಞಾಪನದಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ ಮೌಲ್ಯಮಾಪನ ಮಾಡುವಂತೆ ತಿಳಿಸಲಾಗಿದೆ.

ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರು ಮೌಲ್ಯಮಾಪನ ದಿನಗಳಲ್ಲಿ ಮೌಲ್ಯಮಾಪನ ಶಿಬಿರಗಳಿಗೆ ಭೇಟಿ ನೀಡಿ ಮೌಲ್ಯಮಾಪನಕ್ಕೆ ಮಾಡಿರುವ ವ್ಯವಸ್ಥೆಯನ್ನು ಪರಿಶೀಲಿಸಿ ಯಾವುದೇ ಕುಂದು ಕೊರತೆ ಕಂಡು ಬಂದಲ್ಲಿ ಬಗೆಹರಿಸಲು ಕ್ರಮ ಕೈಗೊಂಡು ಮೌಲ್ಯಮಾಪಕರಿಗೆ ಸೂಕ್ತ ಮಾರ್ಗದರ್ಶನ ನೀಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ ಹಾಗೂ ಹಿರಿಯ ತಾಂತ್ರಿಕ ಸಹಾಯಕರುಗಳು ಕಾಲಕಾಲಕ್ಕೆ ಮೌಲ್ಯಮಾಪನ ಶಿಬಿರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕೆಂದು ತಿಳಿಸಲಾಗಿದೆ.

ವಿದ್ಯಾರ್ಥಿಗಳ ಫಲಿತಾಂಶಗಳನ್ನು ಶೀಘ್ರವಾಗಿ ನೀಡಲು ಅನುವಾಗುವಂತೆ, ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳಿಗೆ ಸಂಬಂಧಪಟ್ಟ ಮಾರ್ಕ್ಸ್‌ಲಿಸ್ಟ್‌ಗಳಿಂದ ಅಂಕಗಳನ್ನು ಕೀಯಿಂಗ್ ಮಾಡಿಸುವ ಸಂಬಂಧ ತಾಂತ್ರಿಕ ನೆರವಿಗಾಗಿ ಶ್ರೀ ಹರೀಶ ಶೆಟ್ಟಿ, ಪ್ರಾಚಾರ್ಯರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು, ಸಿಸ್ಟಂ ಅನಾಲಿಸ್ಟ್, ಗಣಕ ಕೇಂದ್ರ, ತಾಂ.ಪ.ಮಂ. ಪ್ರೊಗ್ರಾಮರ್ ಗಣಕ ಕೇಂದ್ರ, ತಾಂ.ಪ.ಮಂ. ಇವರುಗಳನ್ನು ಉಲ್ಲೇಖ (5)ರ ಅನ್ವಯ ಕೀಯಿಂಗ್ ಅಧಿಕಾರಿಗಳು ಸಂಪರ್ಕಿಸಲು ತಿಳಿಸಲಾಗಿದೆ

**ಸಂಸ್ಥೆಗಳಲ್ಲಿನ ಉಪನ್ಯಾಸಕರು ವಿಷಯ ಪರೀಕ್ಷಕರ ಸಮಿತಿ ಸದಸ್ಯ/ಅಧ್ಯಕ್ಷರು, ಪ್ರಶ್ನೆ ಪತ್ರಿಕೆ ರಚನಾಕಾರರು ಹಾಗೂ ಮುಖ್ಯ ಮೌಲ್ಯಮಾಪಕರಾಗಿದ್ದಲ್ಲಿ ಯಾವುದೇ ಕಾರಣಕ್ಕೂ ಅವರನ್ನು ಸಂಸ್ಥೆಗಳಲ್ಲಿ ಉಳಿಸಿಕೊಳ್ಳದೇ ಮೌಲ್ಯಮಾಪನ ಕೇಂದ್ರಕ್ಕೆ ಬಿಡುಗಡೆಗೊಳಿಸತಕ್ಕದ್ದು.** ಮೌಲ್ಯಮಾಪನ ಕಾರ್ಯಕ್ಕೆ ಗೈರು ಹಾಜರಾಗುವ ಉಪನ್ಯಾಸಕರು ಹಾಗೂ ಮೌಲ್ಯಮಾಪನಕ್ಕೆ ಬಿಡುಗಡೆಗೊಳಿಸದ ಪ್ರಿನ್ಸಿಪಾಲರುಗಳ ವಿರುದ್ಧ ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಮಾವಳಿ, ಉಲ್ಲೇಖ (6) ರ ಸರ್ಕಾರಿ ಆದೇಶ ಮತ್ತು 1983 ರ ಶಿಕ್ಷಣ ಕಾಯ್ದೆ ನಿಯಮ 28ರ ಅಡಿಯಲ್ಲಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ,

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮುಂದಿನ ಕ್ರಮಕ್ಕಾಗಿ
2. ನೋಡಲ್ ಮೌಲ್ಯಮಾಪನ ಕೇಂದ್ರದ ಶಿಬಿರಾಧಿಕಾರಿಗಳು/ಸಹಾಯಕ ಶಿಬಿರಾಧಿಕಾರಿಗಳು/ ಮೌಲ್ಯಮಾಪನ ಶಿಬಿರ ಮೇಲ್ವಿಚಾರಕರು/ಕೀಯಿಂಗ್ ಅಧಿಕಾರಿಗಳು–ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ:

1) ಶ್ರೀ ಹರೀಶ ಶೆಟ್ಟಿ, ಪ್ರಾಚಾರ್ಯರು,ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು
2) ಸಿಸ್ಟಂ ಅನಾಲಿಸ್ಟ್, ಗಣಕ ಕೇಂದ್ರ, ತಾಂ.ಪ.ಮಂ. ಬೆಂಗಳೂರು
3) ಪ್ರೊಗ್ರಾಮರ್, ಗಣಕ ಕೇಂದ್ರ, ತಾಂ.ಪ.ಮಂ. ಬೆಂಗಳೂರು
4) ಹಿರಿಯ ತಾಂತ್ರಿಕ ಸಹಾಯಕರುಗಳು, ತಾಂ.ಪ.ಮಂ. ಬೆಂಗಳೂರು
5) ಇಬಿಎಲ್ ವಿಭಾಗ, ತಾಂ.ಪ.ಮಂ. ಬೆಂಗಳೂರು
6) ಮಾನ್ಯ ಆಯುಕ್ತರವರ ಆಪ್ತ ಶಾಖೆ
7) ನಿರ್ದೇಶಕರವರ ಆಪ್ತ ಶಾಖೆ
8) ಕಾರ್ಯದರ್ಶಿಯವರ ಆಪ್ತ ಶಾಖೆ
9) ಇ-ಆಡಳಿತ – ವೆಬ್ ಸೈಟ್ ನಲ್ಲಿ ಪ್ರಕಟಿಸಲು